ಉಪಕರಣಗಳಿಂದ ಬಲಪಡಿಸಲಾಗಿದೆ.

2. ವೀರ್ಯ ಉತ್ಪಾದನೆಗೆ ಬಳಸುವ ಹೋರಿ ಕೋಣಗಳು ಯಾವುದೇ ಅನುವಂಶಿಕ ಕಾಯಿಲೆಗಳನ್ನು ಹೊಂದಿಲ್ಲದಿರುವುದನ್ನು ಖಾತ್ರಿಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

3. ರಾಜ್ಯದ ಎಲ್ಲಾ ಪಶುವೈದ್ಯಕೀಯ ಸಂಸ್ಥೆಗಳಲ್ಲೂ ದ್ರವಸಾರಜನಕ ಪೂರೈಕೆಯನ್ನು ತೃಪ್ತಿಕರವಾಗಿರುವಂತೆ ಕಾಯ್ದುಕೊಂಡು ಘನೀಕೃತ ವೀರ್ಯವನ್ನು ಸರಬರಾಜು ಮಾಡಲಾಗುತ್ತಿದೆ.

4. ಕೃತಕ ಗರ್ಭಧಾರಣ ಕಾರ್ಯಕರ್ತರುಗಳಿಗೆ ಆಗಿಂದಾಗ್ಗೆ ಪುನಃಶ್ಚೇತನ ತರಬೇತಿ ನೀಡಲಾಗುತ್ತಿದೆ.

5. ರೈತರ ಮನೆ ಬಾಗಿಲಿನಲ್ಲೇ ಕೃತಕ ಗರ್ಭಧಾರಣೆ ಮಾಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳ ಪರಿಶೀಲಿಸಲಾಗುತ್ತಿದೆ.

ಈ)

ವರ್ಷ	ಕೃತಕ ಗರ್ಭಧಾರಣೆ ಮಾಡಿದ ರಾಸುಗಳ ಸಂಖ್ಯೆ
96-97	59641
97-98	60731
98-99	50842
ಒಟ್ಟು	171214

ಉ) ಶೇಕಡಾ 58.5

ಊ) ಅವಶ್ಯಕತೆ ಇರುವುದಿಲ್ಲ

ರಾಜ್ಯದಲ್ಲಿರುವ ಅರಣ್ಯ ಪ್ರದೇಶದಲ್ಲಿ ಗಿಡಮರಗಳನ್ನು ಬೆಳೆಸದೇ ಇರುವ ಪ್ರದೇಶ

1734 (2184) ಶ್ರೀ ಡಿ.ಆರ್.ಪಾಟೀಲ್ (ಗದಗ್): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ನಮ್ಮ ರಾಜ್ಯದಲ್ಲಿ ಇರುವ ಅರಣ್ಯ ಪ್ರದೇಶವೆಷ್ಟು;

ಆ) ಇದರಲ್ಲಿ ಗಿಡ ಮರಗಳಿಲ್ಲದ ಪ್ರದೇಶವೆಷ್ಟು;

ಇ) ಗಿಡ ಮರಗಳನ್ನು ಬೆಳೆಸುವ ಷರತ್ತಿನೊಂದಿಗೆ ಆ ಗ್ರಾಮದಲ್ಲಿರುವ ಭೂ ಹೀನರಿಗೆ ಹಾಗೂ ಗ್ರಾಮಸ್ಥರಿಗೆ ಈ ಭೂಮಿ ಕೊಡುವುದರಲ್ಲಿ ಇರುವ ತೊಂದರೆ ಏನು;

ಈ) ಬೇರೆ ಬೇರೆ ಜಾತಿ ಗಿಡಗಳು ಪ್ರತಿನಿತ್ಯ ಅವು ಉಪಯೋಗಿಸುವ ಆಮ್ಲಜನಕ ಹಾಗೂ ಅಂಗಾರಾಮ್ಲ ವಾಯುವಿನ ಪ್ರಮಾಣ ಎಷ್ಟು; ಗಿಡ ಮರಗಳ ಜಾತಿಯ ಆಧಾರದ ಮೇಲೆ ವಿವರ ಒದಗಿಸುವುದು?

ಶ್ರೀ ಕೆ.ಎಚ್.ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು).

ಅ) 38, 28, 428 ಹೆಕ್ಟೇರುಗಳು.

ಆ) 11,85,245 ಹೆಕ್ಟೇರ್‌ಗಳು. (ಪೊದೆಗಳನ್ನೊಳಗೊಂಡಂತೆ ಶೇ.10 ಕ್ಕಿಂತ ಕಡಿಮೆ ಇರುವಕ ಸಾಂದ್ರತೆ ಪ್ರದೇಶ)

ಇ) ರಾಷ್ಟ್ರೀಯ ಅರಣ್ಯ ನೀತಿಯಂತೆ ಅರಣ್ಯ ಪ್ರದೇಶವನ್ನು ಹೆಚ್ಚಿಸಲು ಇಂತಹ ಭೂಮಿಗಳಲ್ಲಿ ಗ್ರಾಮ.

ಅರಣ್ಯ ಸಮಿತಿಗಳನ್ನು ರಚಿಸಿಕೊಂಡು ಇಲಾಖಾ ವತಿಯಿಂದ ಅರಣ್ಯೀಕರಣ ಮಾಡಲಾಗುತ್ತಿದೆ.

ಶಾಸಗಿ ವ್ಯಕ್ತಿಗಳಿಗೆ ಮರಗಳನ್ನು ಬೆಳೆಸಲು ಅರಣ್ಯ

ಭೂಮಿಯನ್ನು ನೀಡಬೇಕಾದಲ್ಲಿ, ಅರಣ್ಯ ಸಂರಕ್ಷಣಾ ಕಾಯ್ದೆ, 1980ರಂತೆ ಕೇಂದ್ರ ಸರ್ಕಾರದ ಪೂರ್ವಾನುಮತಿ ಪಡೆಯಬೇಕಾಗಿದೆ.

ಈ) ವಿವರವಾದ ಮಾಹಿತಿಯನ್ನು ಪ್ರತ್ಯೇಕವಾಗಿ ಒದಗಿಸಲಾಗುವುದು.

ಭಾಲ್ಕಿ ತಾಲ್ಲೂಕಿನ ರಸ್ತೆ ಸುಧಾರಣೆ ಬಗ್ಗೆ

1737 (2489) ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ): ಮಾನ್ಯ ಲೋಕೋಪಯೋಗಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾಲ್ಕಿ ತಾಲ್ಲೂಕಿನಿಂದ ನೆರೆಯ ರಾಜ್ಯಗಳಾದ ಆಂಧ್ರಪ್ರದೇಶ ಹಾಗೂ ಮಹಾರಾಷ್ಟ್ರ ರಾಜ್ಯಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳು ಯಾವುವು; (ಎಷ್ಟು ಕಿ.ಮೀ.ರಸ್ತೆ ಎನ್ನುವ ವಿವರಗಳನ್ನು ಒದಗಿಸುವುದು);

ಆ) ಈ ರಸ್ತೆಗಳ ಅಭಿವೃದ್ಧಿಗಾಗಿ ಸರ್ಕಾರ ಪ್ರತಿ ವರ್ಷ ಖರ್ಚು ಮಾಡುತ್ತಿರುವ ಹಣವೆಷ್ಟು; (ಕಳೆದ 3 ವರ್ಷಗಳ ವಿವರಗಳನ್ನು ಒದಗಿಸುವುದು)

ಇ) ಈ ಅಂತರ ರಾಜ್ಯ ಸಂಪರ್ಕ ರಸ್ತೆಗಳು ಸರಿಯಾದ ನಿರ್ವಹಣೆ ಇಲ್ಲದೆ ಅಲ್ಲಲ್ಲಿ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಈ) ಹಾಗಿದ್ದಲ್ಲಿ ಈ ಹಣಕಾಸು ವರ್ಷದಲ್ಲಿ ಈ ಅಂತರರಾಜ್ಯ ರಸ್ತೆಗಳ ಅಭಿವೃದ್ಧಿಗಾಗಿ ಸರ್ಕಾರ ಎಷ್ಟು ಹಣವನ್ನು ಬಿಡುಗಡೆ ಮಾಡಲಿದೆ ಹಾಗೂ ಈ ರಸ್ತೆಗಳನ್ನು ಉತ್ತಮವಾಗಿ ನಿರ್ವಹಣೆ ಮಾಡಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳುತ್ತದೆ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು).

ಅ) ಭಾಲ್ಕಿ-ನೀಲಂಗಾ ರಸ್ತೆ 31.20 ಕಿ.ಮೀ.ಹುಲಸೂರಿನಿಂದ ರಾಜ್ಯ ಗಡಿಯವರೆಗೆ ರಸ್ತೆ 7.20 ಕಿ.ಮೀ. ಮಹಾರಾಷ್ಟ್ರ ರಾಜ್ಯಕ್ಕೆ ಸಂಪರ್ಕ ಕಲ್ಪಿಸುತ್ತವೆ.

ಜಹೀರಾಬಾದ್-ನಾಂದೇಡ ರಾಜ್ಯ ಹೆದ್ದಾರಿ ನೆರೆ ರಾಜ್ಯಗಳಾದ ಆಂಧ್ರಪ್ರದೇಶ ಹಾಗೂ